ಎರಡನೇ ಹಂತದ ವಿಸ್ತರಣೆಗಾಗಿ ಸ್ವಾಧೀನ ಪಡಿಸಿಕೊಂಡಿರುವ ಜಮೀನಿಗೆ ಯಾವುದೇ ಪರಿಹಾರ ಪಾವತಿಸಿರುವುದಿಲ್ಲ.

ಇ) ವಿಮಾನ ನಿಲ್ದಾಣದ ಮೊದಲನೇ ಹಂತದ ಅಭಿವೃದ್ಧಿಗಾಗಿ ಸ್ವಾಧೀನಪಡಿಸಿಕೊಂಡ 234.37$^{1/4}$ ಎಕರೆ ಜಮೀನಿನ ಪೈಕಿ 157.35$^{1/4}$ ಎಕರೆಗೆ ಪರಿಹಾರದ ಮೊತ್ತವನ್ನು ಈಗಾಗಲೇ ಪಾವತಿಸಲಾಗಿದೆ. ಎರಡನೇ ಹಂತದ ವಿಸ್ತರಣೆಗಾಗಿ ಸ್ವಾಧೀನಪಡಿಸಿಕೊಂಡಿರುವ ಜಮೀನಿಗೆ ಪರಿಹಾರ ನೀಡಿಕೆ ಪರಿಶೀಲನೆಯಲ್ಲಿದೆ.

ಈ) ಈ ವಿಮಾನ ನಿಲ್ದಾಣದಲ್ಲಿ ವಿಮಾನದ ಹಾರಾಟಕ್ಕೆ ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರದಿಂದ ಅನುಮೋದನೆ ಬಾಕಿ ಇದೆ. ಅನುಮೋದನೆ ದೊರೆತ ನಂತರ ವಿಮಾನ ಹಾರಾಟವನ್ನು ಪ್ರಾರಂಭಿಸ ಲಾಗುವುದು. ಈ ಸಂಬಂಧ ರಾಜ್ಯ ಸರ್ಕಾರವು ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರಕ್ಕೆ ಪತ್ರವನ್ನು ಬರೆದಿರುತ್ತದೆ.

ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರು ಸರಬರಾಜು

230 (10) ಶ್ರೀ ಸತ್ಯನಾರಾಯಣ ಎಂ. (ಚಾಮುಂಡೇಶ್ವರಿ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರು ಸರಬರಾಜು ಯೋಜನೆಗಳು ಇದ್ದಕ್ಕಿದ್ದಂತೆಯೇ ವಿಫಲವಾದಾಗ ತಕ್ಷಣವೇ ಬೇರೊಂದು ಯೋಜನೆಗೆ ಅನುಮೋದನೆ ಪಡೆಯುವವರೆಗೆ ತಾತ್ಕಾಲಿಕವಾಗಿ ವಿದ್ಯುತ್ ಸಂಪರ್ಕ ಕಲ್ಪಿಸಿ ಕುಡಿಯುವ ನೀರೊದಗಿಸುವಂತಹ ಯೋಜನೆಗಳಿಗೆ ಚೆಸ್ಕಾಂ ಜಾಗೃತ ದಳದವರು ದಂಡ ವಿಧಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಎಷ್ಟು ಪ್ರಕರಣಗಳು ಬೆಳಕಿಗೆ ಬಂದಿವೆ? ಮಾಹಿತಿಯನ್ನು ನೀಡುವುದು? (ಕ್ಷೇತ್ರವಾರು ಮಾಹಿತಿಯನ್ನು ನೀಡುವುದು);

ಇ) ವಿದ್ಯುತ್ ಸಮಸ್ಯೆಯಿಂದಾಗಿ ಇತ್ತೀಚೆಗೆ ಗ್ರಾಮೀಣ ಭಾಗದ ರೈತರಿಗೆ, ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ಕುಡಿಯುವ ನೀರಿಗೂ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ, ಸರ್ಕಾರವು ಕೊಟ್ಟ ಭರವಸೆಯಂತೆ ಈ ಸಮಸ್ಯೆ ನಿವಾರಣೆಗಾಗಿ ಯಾವ ಕ್ರಮ ಕೈಗೊಂಡಿದೆ?

ಊ) ಮೈಸೂರು ತಾಲ್ಲೂಕಿನಲ್ಲಿ ಸಬ್‌ಸ್ಟೇಷನ್‌ಗಳಿರುವ ಗ್ರಾಮಗಳಿಗೆ ದಿನದ 24 ಗಂಟೆಯು ನಿರಂತರ ವಿದ್ಯುತ್ ನೀಡುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಋ) ಹಾಗಿದ್ದಲ್ಲಿ ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ;

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ಇಂತಹ ಯಾವುದೇ ಪ್ರಕರಣ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದಲ್ಲಿ ದಾಖಲಾಗಿರುವುದಿಲ್ಲ.

ಆ) ಅನ್ವಯಿಸುವುದಿಲ್ಲ.

ಇ) ಹೌದು.

ಈ) ಎಲ್ಲಾ ಮೂಲಗಳಿಂದ ಹೆಚ್ಚಿನ ವಿದ್ಯುತ್ ಖರೀದಿಸಿ ಸರಬರಾಜು ಮಾಡುವ ವ್ಯವಸ್ಥೆ ಮಾಡಲಾಗಿದೆ.

ಉ) ಹೌದು.

ಊ) ಪ್ರಸ್ತುತ ಲಭ್ಯವಿರುವ ವಿದ್ಯುತ್ ಆಧಾರದ ಮೇರೆಗೆ ಗ್ರಾಮೀಣ ಪ್ರದೇಶದಲ್ಲಿ 6 ಗಂಟೆ 3 ಫೇಸ್ (ಹಗಲು ವೇಳೆಯಲ್ಲಿ 3 ಗಂಟೆ ಹಾಗೂ ರಾತ್ರಿ ವೇಳೆಯಲ್ಲಿ 3 ಗಂಟೆ) ಮತ್ತು 6 ಗಂಟೆ ಸಿಂಗಲ್ ಫೇಸ್ (ಬೆಳಿಗ್ಗೆ 4 ರಿಂದ 6 ಗಂಟೆಯವರೆಗೆ ಮತ್ತು ಸಂಖ್ಯೆ 7 ರಿಂದ ರಾತ್ರಿ 11 ರವರೆಗೆ) ವಿದ್ಯುತ್ ನೀಡಲಾಗುತ್ತಿದೆ.

ಕೃಷ್ಣಾ ನದಿಯಲ್ಲಿ ಮರಳು ತೆಗೆಯಲು ಪರವಾನಗಿ ಕೊಡುವುದು

233 (111) ಶ್ರೀ ಸಿದ್ದುಸವದಿ (ತೇರದಾಳ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಹಾರಾಷ್ಟ್ರ ಸರ್ಕಾರದಂತೆ ಕೃಷ್ಣಾ ನದಿಯಲ್ಲಿ ಬೋಟ್ ಮೂಲಕ ಮರಳು ತೆಗೆಯಲು ಪರವಾನಗಿ ಕೊಡಲು ಇರುವ ತೊಂದರೆಗಳೇನು;

ಆ) ಅಧಿಕೃತವಾಗಿ ಕೊಡದಿದ್ದಲ್ಲಿ ಹತ್ತಾರು ಕೋಟಿ ರೂಪಾಯಿ ಬೆಲೆ ಬಾಳುವ ಮರಳು ಅನಧಿಕೃತವಾಗಿ ಬೋಟುಗಳ ಮುಖಾಂತರವೇ ತೆಗೆಯುತ್ತಿರುವುದರಿಂದ ಪ್ರತಿ ವರ್ಷ ಸರ್ಕಾರದ ಬೊಕ್ಕಸಕ್ಕೆ ಹಾನಿ ಆಗುತ್ತಿಲ್ಲವೇ;